# ಹುಟ್ಟು

ತುಕ್ಕು
ಕಬ್ಬಿಣಕ್ಕೆ...
ಹಸಿರಿಗಲ್ಲ

★

ಬಿಡದೆ
ಹೊಯ್ದ ಮಳೆಗೆ
ಒಂದು ಹುಟ್ಟಿತು
ಇನ್ನೊಂದು ಸತ್ತಿತು

★

ಕಳೆದ ಕೀಲಿ ಕೈ ಸಿಕ್ಕದೆ
ತೆರೆಯೋಣವೆಂದರೆ
ಬೀಗಕ್ಕೆ ಬಾಯಿಲ್ಲ
ಬರೀ ಹಸಿರು

★

'ಮರೆತವರ ನೆನಪಿಗೆ
ಒಂದೆರಡು ಹಸಿರುಟ್ಟಿಸುವುದು
ನನ್ನ ಧರ್ಮ'
ರಸ್ತೆಯಲಿ ಸಿಕ್ಕ
ನಕ್ಕ ಮಳೆರಾಯ

★

ಹೊರಳಿ ಹೋಗಬೇಕು
ಮರಳಿಬಾರದೆ
ಈ ಹಿಂದಿನಂತೆ
ಎಂದುಕೊಂಡೆ
ಜಗ್ಗಿ ನಿಲ್ಲಿಸಿತು
ಹಸಿರ ಮೊರೆತ

★

ಹತ್ಯಾರದೊಡನೆ
ಹಾಜರಿ ಹಾಕಿದ
ಗುಜರಿ ಹುಡುಗನಿಗೂ
ಗರಗಸವಿಡಲು
ಬಿಲ್ಕುಲ್ ಇಷ್ಟವಿಲ್ಲ
'ಈ ಮಳೆಗಾಲ ಕಳೆಯಲಿ ಸಾರ್'




ಎನ್ನುತ್ತಿದ್ದಾನೆ
'ಹುಟ್ಟು ನಿನ್ನಿಂದಲ್ಲ ಮಳೆರಾಯನಿಂದ'
ಎಂದೇನಾದರೂ
ಅವ್ಯಕ್ತವಾಗಿ
ಅಂದನೇ...

★

ಬೀಜಗಳೇನು ಬಾನಿನುಂದುದುರಿದವೇ...
ಎಂದು ಕೇಳಿದೆ ಮೊಳಕೆಯನ್ನು.
ಹೋಗುವಾಗ ಬೀಗದ ಬಾಯಿಗೆ
ಮಣ್ಣು ತುಂಬಿದ್ದೆಯಾ
ಹೊರಳಿ ಕೇಳಿತು
ನನ್ನನ್ನೇ...

★

ಗೋರಿಗಳ ಮೇಲೆ
ಆಲಗಳರಳಿದ್ದು ನೋಡಿದ್ದೆ
ಬೀಗವೂ ಹಸಿರು ಹುಟ್ಟಿಸಬಲ್ಲುದೆಂದು
ಈಗಷ್ಟೆ ತಿಳಿಯಿತು.

● ರೇಣುಕಾ ರಮಾನಂದ